ಗೊತ್ತಾ ಪುಟ್ಟೀ?" ಕೇಳಿದ್ದ ಜನಾರ್ದನ. ಹೂಂಗುಟ್ಟಿದ್ದಳು ಮಗಳು. ಕತೆಯನ್ನು ಹೀಗೆ ಉದ್ದುದ್ದ ಬೆಳೆಸಿದಷ್ಟೂ ಜಾಸ್ತಿ ದಿನ ಎಳೆಯಬಹುದು ಎನ್ನುವುದು ಜನಾರ್ದನನ ಆಂತರ್ಯ. ಇಲ್ಲದಿದ್ದರೆ ದಿನಕ್ಕೊಂದು ಕತೆ ಅದೆಲ್ಲಿಂದ ಸೃಷ್ಟಿಯಾಗುತ್ತದೆ? ಬರಿದೇ ಮಗಳು ಹೂಂಗುಟ್ಟಿದ್ದಷ್ಟೇ ಆಗಿದ್ದರೆ ಅದ್ಯಾವತ್ತೋ ಈ ಗಳಿಗೆ ಮರೆವಿಗೆ ಸಂದು ಹೋಗಿರುತ್ತಿತ್ತು. ಆದರೆ ಅಪ್ಪನ ಪ್ರಶ್ನೆಗೆ ಹೂಂಗುಟ್ಟಿದ ಮಗಳು ತನ್ನದೊಂದು ಟಿಪ್ಪಣಿ ಸೇರಿಸಿದ್ದಳು,

"ಸೀತೆ ಅಮ್ಮನಷ್ಟು ಚೆನ್ನಾಗಿದ್ಲು, ಅಲ್ವಾ ಅಪ್ಪ?"

"ನಿನ್ನಮ್ಮನಷ್ಟಾ?"

"ಹೂಂ..."

ಬದಿ ಮಲಗಿ ಅಪ್ಪ, ಮಗಳ ಸಂಭಾಷಣೆಗೆ ಕಿವಿ ತೆರೆದುಕೊಂಡಿದ್ದರೂ ಕಣ್ಣೆಳೆದುಕೊಂಡು ಹೋಗುತ್ತಿದ್ದ ಮೀನಾಕ್ಷಿಗೆ ಮಗಳ ಮಾತಿನಿಂದ ಕಚಗುಳಿ ಇಟ್ಟಂತಾಗಿತ್ತು. ಜನಾರ್ದನ ಮಗಳನ್ನು ಬರಸೆಳೆದಪ್ಪಿ ನೆತ್ತಿ ಚುಂಬಿಸಿದ್ದ. ಹಗಲಿಡೀ ಆಡಿ ದಣಿದ ಕಂದನ ಬೆವರ ವಾಸನೆ ಇನ್ನೂ ಮೂಗಿಗೆ ಅಡರುತ್ತಿದೆ ಅನಿಸುತ್ತಿದೆ ಜನಾರ್ದನನಿಗೆ. ತನ್ನ ಅಮ್ಮನನ್ನು ಸೀತೆಯೊಂದಿಗೆ ಹೋಲಿಸಿದ ಅಮಾಯಕ ಮಗಳು ಅದೆಲ್ಲಿ ಕಳೆದುಹೋದಳು? ಬೆಳೆಯುತ್ತಾ, ಬೆಳೆಯುತ್ತಾ ಮನುಷ್ಯ ಮುಗ್ಧತೆ ಕಳೆದುಕೊಳ್ಳುವುದು ಸಹಜ. ಆದರೆ ಮಾನವೀಯತೆ ಅನ್ನುವುದನ್ನೂ ಕಳೆದುಕೊಂಡರೆ ಮನುಷ್ಯತ್ವಕ್ಕೆ ಏನಿದೆ ಬೆಲೆ? ಒಬ್ಬಳೇ ಮಗಳೆಂದು ನೇತ್ರನನ್ನು ಅತಿಶಯ ಕಾಳಜಿ ತೋರಿಸಿ ಬೆಳೆಸಿದ್ದು ನಿಜ. ಅವಳು ಬಾಯ್ಬಿಟ್ಟು ಕೇಳುವುದರೊಳಗೆ ಅವಳ ಬೇಕುಗಳನ್ನು ಪೂರೈಸಲು ತುದಿಗಾಲಲ್ಲಿ ನಿಂತಿರುತ್ತಿದ್ದುದು ನಿಜ. ಹೆತ್ತವರ ಪ್ರೀತಿಯ ಮಹಾಪೂರದಲ್ಲಿ ಏಕೈಕ ವಾರಸುದಾರಿಣಿಯಾಗಿ ಬೆಳೆದ ಮಗಳು ಕಾರ್ಪಣ್ಯದ ನೆರಳೂ ತಗುಲದೆ ರಾಜಕುಮಾರಿಯಂತೆ ಬೆಳೆದಿದ್ದಳು. ಅವಳನ್ನು ಹಾಗೆ ಬೆಳೆಸಬೇಕೆಂದು ಗಂಡಹೆಂಡತಿಯ ಆಶಯವಾಗಿತ್ತು ಸಹಾ. ರಾಕ್ಷಸನ ಪ್ರಾಣ ಗಿಳಿಯ ದೇಹದಲ್ಲೆಂಬಂತೆ ಗಂಡಹೆಂಡಿರ ಪ್ರಾಣ ಮಗಳಲ್ಲಿ ಸೇರಿಹೋಗಿತ್ತು. ನಡೆದು ಸ್ಕೂಲಿಗೆ ಹೋದರೆ ಮಗಳ ಅಂಗಾಲು ಸವೆದೀತೆಂದು ಕಾರು ಖರೀದಿಸಿದ್ದ ಜನಾರ್ದನ. ಡ್ರೈವರ್ ಕೆಲಸವನ್ನು ಸ್ವಸಂತೋಷದಿಂದ ವಹಿಸಿಕೊಂಡವನಂತೆ ಮಗಳ ಜೊತೆಯಲ್ಲಿ ಅವಳ ಗೆಳತಿಯರನ್ನೂ ವಾಹನಕ್ಕೇರಿಸಿಕೊಂಡು, ಅವಳ ಸ್ಕೂಲಿಗೆ ರಜಾ ಬಂದ ಕಾಲವನ್ನು ಹೊರತುಪಡಿಸಿ ಒಂದು ದಿನ ಮನೆ ಬಿಟ್ಟು ಹೊರಗೆ ಉಳಿದುಕೊಳ್ಳಲಿಲ್ಲ. ಅವನು ಮಾತ್ರಾ ಅಲ್ಲ, ಮೀನಾಕ್ಷಿ ಕೂಡಾ. ಮಗಳು ಆಸೆಪಟ್ಟಳೆಂದು ತನ್ನ ಪಟ್ಟೆಸೀರೆ ಹರಿಸಿ ಲಂಗ ಹೊಲಿಸಿದವಳು ಮೀನಾಕ್ಷಿ. ತನ್ನ ಕಷ್ಟ, ಸುಖ ಗಮನಿಸದೆ ಮಗಳ ಬಾಯಿಂದ ಉದುರಿ ಬಿದ್ದ ತಿಂಡಿತೀರ್ಥಗಳನ್ನು ಹೊತ್ತುಗೊತ್ತಿನ ಪರಿವೆಯಿಲ್ಲದೆ ಬೇಸರಿಸದೆ ಮಾಡಿಕೊಟ್ಟವಳು. ಮಗಳ ಮೈ ತುಸು ಬೆಚ್ಚಗಾದರೂ ಗಂಡಹೆಂಡಿರ ಜೀವ ಬಾಯಿಗೆ ಬರುತ್ತಿತ್ತು. 'ಅದಕ್ಕೇ ಹೇಳೋದು ಒಂದೇ ಮಗು ಇರಬಾರ್ದು ಅಂತ, ಜೊತೆಗೆ ಇನ್ನೊಂದಿರ್ಬೇಕು ಅಂತ...' ಸಂಬಂಧಿಗಳು ಕೊಂಕಾಡುತ್ತಿದ್ದರು. ಇನ್ನೊಂದು ಮಗು ಬೇಡ ಎಂದು ಇವರೇನು ಗೆರೆ ಎಳೆದುಕೊಂಡಿರಲಿಲ್ಲ. ಆದರೆ ಮತ್ತೆ ಮೀನಾಕ್ಷಿ ಬಸುರು ಹೊತ್ತಿರಲಿಲ್ಲ. ದೇವರು ಕೊಟ್ಟಿದ್ದರಲ್ಲಿ ಸುಖ ಕಂಡುಕೊಂಡು ದಂಪತಿ ತಮ್ಮದೇ ತೃಪ್ತಲೋಕದಲ್ಲಿ ಸಂತೋಷವಾಗಿದ್ದರು. ಡಿಗ್ರಿ ಮುಗಿಸಿದಳು ನೇತ್ರಾ, ಪಕ್ಕದ ತಾಲ್ಲೂಕುಕೇಂದ್ರಕ್ಕೆ ದಿನವೂ ಬಸ್ಸಿನಲ್ಲಿ ಓಡಾಡುತ್ತಾ. ದಿನವೂ ಮಗಳನ್ನು ಕಾಲೇಜಿಗೆ ಕರೆದುಕೊಂಡು ಹೋಗುವ ಸಾರಥ್ಯ ವಹಿಸಲು ಅಪ್ಪನೇನೋ ರೆಡಿ. ಆದರೆ ಬೆಂಗಾವಲಿನವನಂತೆ ಅಪ್ಪ ಸದಾ ತನ್ನ ಬೆನ್ನ ಹಿಂದಿರುವುದು ಪ್ರಾಯಕ್ಕೆ ಬಂದಿದ್ದ ಮಗಳಿಗೆ ಅಪಥ್ಯ. ಗೆಳತಿಯರ ಜೊತೆ